

ಅನ್ಯಾಯಕಾರಿ ಬ್ರಹ್ಮ, ಈ ಸುಂದರನ ಸನ್ಯಾಸಿ ಮಾಡಬಹುದೇ...

ಇತ್ತೀಚಿನ ವರ್ಷಗಳಲ್ಲಿ ಕನ್ನಡದ ಹೊಸ ತಲೆಮಾರನ್ನು ಈ ಹಾಡು ಆವರಿಸಿಕೊಂಡಂತೆ ಮತ್ತೊಂದು ಗೀತೆ ಮರುಳು ಮಾಡಿಲ್ಲ. ಮಕ್ಕಳು, ಮಹಿಳೆಯರು, ತರುಣ ತರುಣಿಯರು, ಹಿರಿಯ ನಾಗರಿಕರು – ಬ್ರಹ್ಮನ ಅನ್ಯಾಯಕಾರಿ ಎಂದು ಕರೆಯದವರುಂಟೆ? ಸಾಮಾಜಿಕ ಜಾಲತಾಣಗಳಲ್ಲಂತೂ ಈ ಹಾಡಿನ ವಿಡಿಯೊಗಳು, ರೀಲ್ಸ್‌ಗಳ ಅಬ್ಬರ. ಜನಪದ ಗೀತೆಯೊಂದು ಯುವ ಮನವನ್ನು ಈ ರೀತಿ ಆಕರ್ಷಿಸಿರುವುದು ಡಿಜಿಟಲ್ ಯುಗದ ಅಚ್ಚರಿಯೇ ಸರಿ.

‘ಅನ್ಯಾಯಕಾರಿ ಬ್ರಹ್ಮ’ ಎಷ್ಟೆಲ್ಲ ರೀತಿಗಳಲ್ಲಿ ಬಳಕೆಯಾಗುತ್ತಿದೆ ನೋಡಿ: ಮದುವೆಯಾಗದ ಹುಡುಗರನ್ನು ವ್ಯಂಗ್ಯ ಮಾಡಲು ಸ್ನೇಹಿತರು ಈ ಹಾಡು ಬಳಸಿ ರೀಲ್ಸ್ ಮಾಡುತ್ತಿದ್ದಾರೆ. ಪತ್ನಿಯರು ತಮ್ಮ ಗಂಡಂದಿರನ್ನು ತೋರಿಸಿ ‘ಸುಂದರನ ಸನ್ಯಾಸಿ ಮಾಡಬಹುದೇ’ ಎಂದು ಛೇಡಿಸುತ್ತಿದ್ದಾರೆ. ಪುಟಾಣಿ ಹೆಣ್ಣುಮಕ್ಕಳು ತಮ್ಮ ಸಹೋದರರತ್ತ ಬೆರಳು ತೋರಿಸಿ ಇದೇ ಹಾಡಿಗೆ ಹೆಜ್ಜೆ ಹಾಕುತ್ತಿದ್ದಾರೆ. ಅಜ್ಜಿಯೊಬ್ಬಳು ತಮ್ಮ ಪತಿಯ ಸುಂದರನೆಂದು ತಮಾಷೆ ಮಾಡುತ್ತಿದ್ದಾರೆ. ಜನಪದ ಗೀತೆಗೆ ತರುಣ ತರುಣಿಯರು ಹಾಕುತ್ತಿರುವ ಹೆಜ್ಜೆಗಳು ಜನರ ಮನಗೆದ್ದಿವೆ. ಸಿನಿಮಾ ನಟ ನಟಿಯರು, ರಾಜಕಾರಣಿಗಳು ಕೂಡ ಈ ಗೀತೆಗೆ ಮನಸೋತಿದ್ದಾರೆ. ಅನ್ಯಾಯಕಾರಿ ಬ್ರಹ್ಮನಿಗೂ ಒಂದು ಕಾಲ!

ವಿಸ್ಮೃತಿಯಂತೆ ಎದ್ದು ಬಂದಂತೆ ಕಾಣಿಸುತ್ತಿರುವ ‘ಅನ್ಯಾಯಕಾರಿ ಬ್ರಹ್ಮ’ ಗೀತೆಯ ಯಶಸ್ಸಿನ ಹಿನ್ನೆಲೆಯಲ್ಲಿ ಬೆಳ್ಳಿಚುಕ್ಕಿಯಂತೆ ಸಾಧ್ಯತೆಯೊಂದು ಕಾಣಿಸುತ್ತಿದೆ. ಅದು, ಡಿಜಿಟಲ್ ಸ್ಪರ್ಶ ನೀಡುವ ಮೂಲಕ ಜನಪದ ಗೀತೆಗಳನ್ನು ಹೊಸ ತಲೆಮಾರಿಗೆ ದಾಟಿಸುವುದು.

ಕೆಲವು ವರ್ಷಗಳ ಹಿಂದೆ ಅನನ್ಯಾ ಭಟ್ ಅವರ ಕಂಠದಲ್ಲಿ ಮೂಡಿಬಂದಿದ್ದ ‘ಸೋಜುಗಾದ ಸೂಜಿಮಲ್ಲಿಗೆ’ ಗೀತೆಯೂ ಹೀಗೆಯೇ ಜನಪ್ರಿಯಗೊಂಡಿದ್ದು. ‘ಸೋಜುಗಾದ ಸೂಜಿಮಲ್ಲಿಗೆ’ ಗೀತೆಯನ್ನು ಈಗಾಗಲೇ ಅನೇಕರು ಹಾಡಿದ್ದಾರೆ. ಆದರೆ, ಅನನ್ಯಾ ಅವರ ತಾರಕಸ್ಥಾಯಿಯಲ್ಲಿ ಅನುರಣನಗೊಂಡ ಗೀತೆ ಹೊಸ ತಲೆಮಾರಿಗೆ ಹುಚ್ಚು ಹಿಡಿಸುವಂತಿತ್ತು. ಈಗಿನ ‘ಅನ್ಯಾಯಕಾರಿ ಬ್ರಹ್ಮ’ ಹಾಡು ಹೊಸ ದನಿಯಲ್ಲೇನೂ ಮೂಡಿಬಂದಿಲ್ಲ. ಹಾಸ್ಟೆಲ್‌ನ ಹುಡುಗಿಯರ ಗುಂಪೊಂದು ಈ ಹಾಡಿಗೆ ತಮಗೆ ತಿಳಿದಂತೆ ಹೆಜ್ಜೆ ಹಾಕಿ, ಆ ವಿಡಿಯೊವನ್ನು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದರಷ್ಟೇ... ಮುಂದಿನದು ಈಗ ಇತಿಹಾಸ. ಒಂದಷ್ಟು ಜನ ಹುಡುಗಿಯರನ್ನು ಮೆಚ್ಚಿಕೊಂಡು, ಮತ್ತೊಂದಷ್ಟು ಜನ ಕಾಲೆಳೆದು ಆ ವಿಡಿಯೊವನ್ನು ಹಂಚಿಕೊಂಡರು. ಕೊನೆಗೆ ಜನರ ಮನಸ್ಸಿನಲ್ಲಿ ಉಳಿದದ್ದು ನೃತ್ಯವಲ್ಲ, ಹಾಡು.

‘ಅನ್ಯಾಯಕಾರಿ ಬ್ರಹ್ಮ’ ಗೀತೆ ಜನಪ್ರಿಯಗೊಂಡಂತೆ, ಅದರ ಹಾಡುಗಾರ ಯಾರು ಎನ್ನುವ ಪ್ರಶ್ನೆಯೂ ಕೇಳಿಬಂತು. ಆಗ ಮುನ್ನೆಲೆಗೆ ಬಂದವರು ಮಳವಳ್ಳಿ ಎಂ. ಮಹದೇವಸ್ವಾಮಿ.

ಜನಪದ ಸಾಹಿತ್ಯಕ್ಕೆ ಮಹದೇವ ಸ್ವಾಮಿ ಹೊಸಬರಲ್ಲ, ಅವರ ಕಂಠ ಕನ್ನಡದ ಕೇಳುಗರಿಗೆ ಅಪರಿಚಿತವೂ ಅಲ್ಲ. ನೂರಾರು ಗೀತೆಗಳು ಅವರ ಕಂಠದಲ್ಲಿ ಜೀವಸ್ಪರ್ಶ ಪಡೆದುಕೊಂಡಿವೆ. ಅವರು ಹಾಡಿದ ಆಲ್ಬಂಗಳು ಲಕ್ಷಾಂತರ ಸಂಖ್ಯೆಯಲ್ಲಿ ಮಾರಾಟಗೊಂಡಿವೆ. ಆದರೆ, ಅದೆಲ್ಲ ಜನಪ್ರಿಯತೆಯನ್ನು ಮೀರುವಂತೆ ‘ಅನ್ಯಾಯಕಾರಿ ಬ್ರಹ್ಮ’ ಜನಮನ ಗೆದ್ದಿದೆ. ಹಾಡು ಜನಪ್ರಿಯಗೊಂಡ ನಂತರ, ‘ಅನ್ಯಾಯಕಾರಿ ಬ್ರಹ್ಮ’ ಗೀತೆಯ ಅರ್ಥ ಹುಡುಕಿದವರಿದ್ದಾರೆ. ಜನಪದ ಕತೆ, ಕಾವ್ಯಗಳ ಬೆನ್ನು ಬಿದ್ದವರಿದ್ದಾರೆ. ತಂಬೂರಿಯ ಶ್ರುತಿ, ಗಗ್ಗರದ ನಾದಗಳಿಗೆ ಮರುಳಾದವರಿದ್ದಾರೆ. ಎಲ್ಲಕ್ಕೂ ಮಿಗಿಲಾಗಿ,